

ಹಳೆಯ ಕಥೆ ಹೇಳುವಂತಿರುವ ಓಣಿಗಳು

ಮಾಡಲಾಗಿದೆ. ಅಲ್ಲಿ ಅವರ 120 ಕಿಲೋ ತೂಕದ ಕಂಚಿನ ಮೂರ್ತಿ ಇಡಲಾಗಿದೆ.

ನಂತರದ ನಡಿಗೆಯಲ್ಲಿ ಸಿಗುವುದು ಪಾರಿವಾಳಗಳಿಗೆ ಧಾನ್ಯಗಳನ್ನು ಇಡುವ ಸುಂದರ ಕೆತ್ತನೆಯ ಕಂಬ ಚಬೂತರ್. ಇಲ್ಲಿ ಪಾರಿವಾಳ ಮತ್ತು ಇತರ ಪಕ್ಷಿಗಳಿಗೆ ಧಾನ್ಯ, ನೀರು ಇಡುತ್ತಿದ್ದರು. ಎತ್ತರದ ಸ್ಥಳ, ಹತ್ತಲು ಇಕ್ಕಟ್ಟಾದ ಮೆಟ್ಟಿಲು. ಬೆಕ್ಕು ನಾಯಿಗಳಿಗೆ ಹೋಗಲು ದುಸ್ತರ ಜಾಗವಾಗಿ ಪಕ್ಷಿಗಳಿಗೆ ಸುರಕ್ಷಿತ ಜಾಗ ಈ ಚಬೂತರ್. ಈ ಓಣಿಯ ಉದ್ದಕ್ಕೂ ಹಳೆಯ ಕಟ್ಟಡಗಳು ಹಳೆಯ ಮಾದರಿಯ ಬಾಗಿಲುಗಳು, ಕಿಟಕಿಗಳು ಕಾಣುತ್ತವೆ.

ಹಳೆಯ ಓಣಿಗಳಲ್ಲಿ ಸಾಗಿದಾಗ ಅತ್ಯಂತ ಪುರಾತನ ರಾಮಮಂದಿರ ಸಿಗುತ್ತದೆ. ಇದರ ಸುತ್ತ ಮನೆಗಳಿದ್ದುದಕ್ಕೆ ಹವೇಲಿ ಮಂದಿರ ಎನ್ನುತ್ತಾರೆ. ಯಾವುದೇ ಆಧುನೀಕರಣ ಸೋಕದ ಹಳೆಯ ಮನೆಯಲ್ಲಿ ಈ ಮಂದಿರವಿದೆ. ಸುಮಾರು 600 ವರ್ಷಗಳಷ್ಟು ಹಳೆಯ ಮೂರ್ತಿಗಳು ಇಲ್ಲಿವೆ. ನಮ್ಮಲ್ಲಿ ತೊಟ್ಟಿ ಮನೆ ಎಂದು ಕರೆಯಲಾಗುವ ಮನೆಯಂಥದ್ದೇ ಈ ಮನೆ, ಮಂದಿರವೂ ಹೌದು. ಚೌಕಾಕಾರದ ಅಂಗಳ. ಅಂಗಳದಲ್ಲಿ ಅಲಂಕೃತವಾದ ಬೋದಿಗೆಗಳಿವೆ. ಕಪ್ಪು ಶಿಲೆಯ ರಾಮ ಲಕ್ಷ್ಮಣ ಸೀತಾಳ ವಿಗ್ರಹಗಳಿವೆ. ಈ ವಿಗ್ರಹಗಳು ಕುಳಿತ ಭಂಗಿಯಲ್ಲಿವೆ. ಭಾರತದಲ್ಲಿ ಎಲ್ಲೆಡೆ ನಿಂತ ರಾಮನ ವಿಗ್ರಹಗಳು ಕಂಡರೆ, ಇಲ್ಲಿನ ಕುಳಿತ ವಿಗ್ರಹ ಅಪರೂಪದ್ದು ಎಂದು ನಮ್ಮ ಮಾರ್ಗದರ್ಶಿ ಹೇಳಿದರು. ಕಪ್ಪು ಶಿಲೆಯ ಸುಂದರ ರಾಮನನ್ನು ಕಣ್ತುಂಬಿಕೊಂಡು ಹೊರಗೆ ಬಂದು ಮತ್ತೆ ಹಳೆಯ ಓಣಿಗಳಲ್ಲಿ ಸಾಗಿದೆವು.

ಮುಂದೆ ನಮ್ಮ ನಡಿಗೆ ತಲುಪಿದ್ದು ಸುಂದರ ಜೈನ ಮಂದಿರಕ್ಕೆ. ಇದು ಸಂಗಮವರಿಕಲ್ಲಿನಲ್ಲಿ ರಚಿತವಾದ 15ನೇ ಶತಮಾನದ ಮಂದಿರ. ಸುಂದರ ಕೆತ್ತನೆಗಳು, ತೀರ್ಥಂಕರರ ಮೂರ್ತಿಗಳು ಗಮನಸೆಳೆಯುತ್ತವೆ. ಇಲ್ಲಿನ ಬಾವಿ ಅತ್ಯಂತ ಪುರಾತನವಾದದ್ದು. ಇಲ್ಲಿ ಶೇಖರವಾಗುವ ನೀರು ದೇವಾಲಯದ ಚಾವಣಿಯಿಂದ ಬರುವ ಮಳೆ ನೀರು. 19ನೇ ಶತಮಾನದಲ್ಲಿಯೇ ಇಂಥ ಬಾವಿಯ ಕಲ್ಪನೆ ಸಾಕಾರಗೊಂಡಿದೆ. ನೀರು ತಾಮ್ರದ ಕೊಳವೆಗಳಿಂದ ಸಂಗ್ರಹವಾಗುತ್ತದೆ. ವರ್ಷಪೂರ್ತಿ ಪೂಜೆ ಅಭಿಷೇಕಕ್ಕೆ ಈ ನೀರನ್ನು ಬಳಸುತ್ತಾರೆ. ಇವೆಲ್ಲ ಇರುವುದು ಕಾಲುಪುರದಲ್ಲೇ.

ಇಲ್ಲಿಂದ ಸಾಗುತ್ತಿದ್ದಂತೆ ಅತ್ಯಂತ ಹಳೆಯ ಮನೆಗಳ ಸಾಲೇ ಕಣ್ಮುಂದೆ ತೆರೆದುಕೊಳ್ಳುತ್ತದೆ. ಈ ಮನೆಗಳು ಮೂರು ತರಹದ ವಾಸ್ತುಶೈಲಿಯನ್ನು ಹೊಂದಿವೆ. ಗೈಡ್ ವಿವರಿಸಿದಂತೆ, ನಮ್ಮ ಮನೆ ಪಕ್ಕದ ಮನೆಗಿಂತ ಭಿನ್ನವಾಗಿರಬೇಕೆಂದು ಕೆಲವರು ಚೀನಾ ಮಾದರಿಯಲ್ಲಿ ಕಟ್ಟಿಸಿದ್ದರೆ, ಕೆಲವರು ಇಂಡೊಸಾರ್ಸೆನಿಕ್ ಮಾದರಿಯಲ್ಲಿ ಕಟ್ಟಿಸಿದ್ದಾರೆ. ಹಳೆಯ ಮನೆಗಳಾದ್ದರಿಂದ ಕಾಲಕಾಲಕ್ಕೆ ಸಣ್ಣಪುಟ್ಟ ರಿಪೇರಿ ಮಾಡಿ, ಬಣ್ಣ ಹಚ್ಚಿ ಬೀಳದಂತೆ ಮಾಡಿದ್ದಾರೆ.

ಗುಜರಾತ್‌ನಲ್ಲಿ ಕೋಟೆಗಳು ಕಡಿಮೆ. ಇಲ್ಲಿನ ಜನ ವ್ಯಾಪಾರಸ್ಥರು. ಯಾರೇ ಬರಲಿ



ಸಾಂಪ್ರದಾಯಿಕ ಶೈಲಿಯ ಮನೆಗಳು



ಗುಜರಾತಿನ ಪ್ರಸಿದ್ಧ ಕವಿ ದಳಪತರಾಮನ ಕಂಚಿನ ಪ್ರತಿಮೆ

ಅವರೊಡನೆ ವ್ಯಾಪಾರಕ್ಕೆ ಮುಂದಾಗುತ್ತಾರೆ. ಗೋಡೆಗಳಿಗಿಂತ ತೆರೆದ ಬಾಗಿಲುಗಳೇ ಹೆಚ್ಚು. ಪ್ರಸಿದ್ಧ ಬಟ್ಟೆ ವ್ಯಾಪಾರಸ್ಥರಾದ ಅಂಬಾಲಾ ಸಾರಾಭಾಯ, ಹಥಿಸಿಂಗ್, ಮಂಗಲದಾಸ ಗಿರಿದಾಸ ಕಸ್ತೂರಭಾಯ್ ಲಾಲಭಾಯ್ ಅವರ ಮನೆಗಳು, ಚೀನಾ ಇಂಡಿಯನ್ ವಾಸ್ತುಶೈಲಿಯಲ್ಲಿ, ಕಟ್ಟಿಗೆಯಲ್ಲಿ ಡ್ರ್ಯಾಗನ್ ಕಲಾಕೃತಿಗಳನ್ನು ಹೊತ್ತು ನಿಂತ ಮನೆಗಳು, ಅಂದಿನ ಗುಜರಾತ್, ಆಧುನಿಕತೆಗೆ, ಶಿಕ್ಷಣ ಪದ್ಧತಿಗೆ ತೆರೆದುಕೊಂಡಿದ್ದನ್ನು ನೆನಪಿಸಿತು.

ನಂತರ ಸಿಗುವುದು ಹಳೆಯ ಷೇರು ಮಾರುಕಟ್ಟೆ ಕಟ್ಟಡ. 1894ರಲ್ಲಿ ನಿರ್ಮಾಣವಾದ ಈ ಕಟ್ಟಡ 1996ರವರೆಗೆ ಕಾರ್ಯನಿರ್ವಹಿಸಿ ಆಧುನಿಕತೆಗೆ ಷೇರು ಮಾರುಕಟ್ಟೆ ಹೊರಳಿದಾಗ ಪಾರಂಪರಿಕ ಕಟ್ಟಡವಾಗಿ ಉಳಿಯಿತು. ಆ ವೇಳೆಯಲ್ಲಿ ಅಲ್ಲಿ 333 ಜನ ವ್ಯವಹಾರ ಮಾಡುತ್ತಿದ್ದರಂತೆ. ಮಾಣೆಕ್‌ಬಾಗ ಮಾರುಕಟ್ಟೆ, ಹಳೆಯ ಅಹಮದಾಬಾದ್‌ನ ಅತ್ಯಂತ ಚಟುವಟಿಕೆಯ ಮಾರುಕಟ್ಟೆ. ಮುಂಜಾನೆ ಕಾಯಿಪಲ್ಲೆ ಮಾರುಕಟ್ಟೆಯಾಗಿ, ಮಧ್ಯಾಹ್ನ ಆಭರಣಗಳಿಗಾಗಿ, ಸಂಜೆ ವೈವಿಧ್ಯಮಯ ತಿನಿಸುಗಳ, ಚಾಟ್‌ಗಳ ಓಣಿಯಾಗಿ ಬದಲಾಗುತ್ತದೆ. ಮಾಣೆಕನಾಥ ಎಂಬ ಸಂತರೊಬ್ಬರ ಹೆಸರಿನಲ್ಲಿ ಈ ಮಾರುಕಟ್ಟೆ ಇದ್ದು, ಅವರ ಸಮಾಧಿಯೂ ಇಲ್ಲಿದೆ.

ಪಾರಂಪರಿಕ ನಡಿಗೆಯ ಕೊನೆಯ ತಾಣ ಜುಮ್ಮಾ ಮಸೀದಿ. ಇದನ್ನು ಏಷ್ಯಾ ಉಪಖಂಡದಲ್ಲಿ ಅತ್ಯಂತ ದೊಡ್ಡ ಮಸೀದಿ ಎನ್ನುತ್ತಾರೆ. ಅಹಮದಾಬಾದ್ ನಿರ್ಮಿಸಿದ ಅಹಮದಶಾ ಅತ್ಯಂತ ಆಸಕ್ತಿಯಿಂದ ನಿರ್ಮಿಸಿದ ಮಸೀದಿ ಇದು. ಮೂರು ಬಾಗಿಲುಗಳನ್ನು ಹೊಂದಿರುವ ಈ ಮಸೀದಿ ಸುಲ್ತಾನನ ಖಾಸಗಿ ಉಪಯೋಗಕ್ಕೆ, ಮುಖ್ಯವಾಗಿ ರಾಜರ ಪ್ರಾರ್ಥನೆಗೆ ಸೀಮಿತವಾಗಿತ್ತು. ಇಲ್ಲಿ ಹಳದಿ ಸಂಗಮವರಿಕಲ್ಲುಗಳನ್ನು ಬಳಸಲಾಗಿದೆ. ಈ ಪ್ರಾರ್ಥನಾ ಮಂದಿರದಲ್ಲಿ 24 ಕಂಬಗಳು ಹಾಗೂ 15 ಗುಮ್ಮಟಗಳಿವೆ.

ಸುಮಾರು ಎರಡೂವರೆ ಗಂಟೆಯಲ್ಲಿ ಪಾರಂಪರಿಕ ನಡಿಗೆ ಮುಕ್ತಾಯಗೊಳ್ಳುತ್ತದೆ. ಸಂಸ್ಕೃತಿ ಹಾಗೂ ಪರಂಪರೆಯನ್ನು ತಿಳಿಸುವ ಇಂಥ ನಡಿಗೆ ಇಂದು ಎಲ್ಲೆಡೆಯೂ ಅವಶ್ಯಕ ಎನಿಸುತ್ತದೆ. ಐತಿಹಾಸಿಕ ಸಂಗತಿಗಳನ್ನು, ವಾಸ್ತುಶೈಲಿಗಳನ್ನು, ಆಯಾ ಪ್ರದೇಶಗಳ ಜನರ ರೂಢಿ, ಸಂಪ್ರದಾಯಗಳನ್ನು ತಿಳಿಸುವ ಇಂಥ ನಡಿಗೆಗಳು ಅಭಿಮಾನ ಮೂಡಿಸುತ್ತವೆ. ಪ್ರವಾಸೋದ್ಯಮ ಬೆಳೆಸಲು ನೆರವಾಗುತ್ತವೆ.